


## ಅತ್ಯಾಧುನಿಕ ತಂತ್ರಜ್ಞಾನದೊಂದಿಗೆ ನಿರ್ಮಾಣವಾಗಲಿರುವ ಮಾಲ್

# ವಿವಿಧೋದ್ದೇಶ ಸಂಕೀರ್ಣಕ್ಕೆ ₹60 ಕೋಟಿ

ಪ್ರಜಾವಾಣಿ ವಾರ್ತೆ

**ತುಮಕೂರು:** ನಗರದಲ್ಲಿ ಸ್ಮಾರ್ಟ್ ಸಿಟಿ ಯೋಜನೆಯಡಿ ಸುಮಾರು ₹ 60 ಕೋಟಿ ವೆಚ್ಚದಲ್ಲಿ ವಿವಿಧೋದ್ದೇಶ (ಮಲ್ಟಿ– ಯುಟಿಲಿಟಿ ಮಾಲ್) ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ ಎಂದು ಸ್ಮಾರ್ಟ್ ಸಿಟಿ ಯೋಜನೆಯ ಅಧ್ಯಕ್ಷೆ ಡಾ.ಶಾಲಿನಿ ರಜನೀಶ್ ಹೇಳಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ನಡೆದ ಮಂಡಳಿ ಸಭೆಯಲ್ಲಿ ಮಾತನಾಡಿದರು.

ಕೈಗಾರಿಕಾ ಕ್ಷೇತ್ರ ಅಭಿವೃದ್ಧಿ ಪಡಿಸುವ ನಿಟ್ಟನಲ್ಲಿ ಯುಟಿಲಿಟಿ ಮಾಲ್ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗಿದೆ. ಸ್ಮಾರ್ಟ್ ಸಿಟಿ ಲಿಮಿಟೆಡ್ ಸಂಸ್ಥೆ ವತಿಯಿಂದ ಅತ್ಯಾಧುನಿಕ ತಂತ್ರಜ್ಞಾನವನ್ನು ಬಳಸಿ ಕೊಂಡು ನಗರವನ್ನು ಅಭಿವೃದ್ಧಿ ಪಡಿಸಲಾಗುವುದು ಎಂದು ಹೇಳಿದರು.

ಸುಮಾರು 19,592 ಚ.ಮೀ ಅಳತೆಯಲ್ಲಿ ಮೂರು ಅಂತಸ್ತಿನ ಮಾಲ್ ನಿರ್ಮಾಣ ಮಾಡಲಾಗುವುದು. ಕಾಯಂ ಹೆಲಿಪ್ಯಾಡ್ ಸೇರಿದಂತೆ ಉದ್ಯಮಿಗಳು ಸಭೆ ನಡೆಸಲು ಸಭಾಂಗಣ, ಹೊಟೇಲ್, ರೆಸ್ಟೋರೆಂಟ್, ಎಟಿಎಂಗಳು, ಸೂಪರ್ ಮಾರುಕಟ್ಟೆ ಸೇರಿದಂತೆ ಹತ್ತು ಹಲವು ಸೌಲಭ್ಯಗಳನ್ನು ಈ ಮಾಲ್ ಒಳಗೊಂಡಿರುತ್ತದೆ ಎಂದು ತಿಳಿಸಿದರು.

ಸ್ಮಾರ್ಟ್ ಸಿಟಿ ಯೋಜನೆಯಡಿ ಆಸ್ಪತ್ರೆಗಳ ಆಧುನೀಕರಣ ಹಾಗೂ ಕ್ರೀಡಾಂಗಣಗಳನ್ನು ಮೇಲ್ದರ್ಜೆಗೇರಿಸುವ ಕಾಮಗಾರಿಗಳಿಗೆ ಆದ್ಯತೆ ನೀಡಲಾಗುವುದು ಎಂದರು.

ಸಭೆಯಲ್ಲಿ ರಸ್ತೆ ಅಭಿವೃದ್ಧಿ, ಸಿಸಿಟಿವಿ, ಟ್ರಾಫಿಕ್ ನಿಯಂತ್ರಣ, ಸರ್ಕಾರಿ ಪದವಿಪೂರ್ವ ಕಾಲೇಜಿನ ಪುನರುಜ್ಜೀವನ ಕಾರ್ಯ, ಡಿಜಿಟಲ್ ಗ್ರಂಥಾಲಯ ನಿರ್ಮಾಣ, ಉದ್ಯಾನವನಗಳ ಅಭಿವೃದ್ಧಿ, ಸ್ಮಾರ್ಟ್ ಲಾಂಜ್, ಎಲ್‌ಇಡಿ ಸ್ಮಾರ್ಟ್ ಲೈಟ್, ಶಿಕ್ಷಣ, ಕ್ರೀಡೆ ಸೇರಿದಂತೆ ಹಲವು ಯೋಜನೆ ಬಗ್ಗೆ ಪರಿಶೀಲನೆ ನಡೆಸಿದರು.

ಮೇಯರ್ ಲಲಿತಾ ರವೀಶ್, ಉಪಮೇಯರ್ ಬಿ.ಎಸ್. ರೂಪಶ್ರೀ, ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮದ ವ್ಯವಸ್ಥಾಪಕ ನಿರ್ದೇಶಕ ಎ.ಬಿ.ಇಬ್ರಾಹಿಂ, ಜಿಲ್ಲಾಧಿಕಾರಿ ಡಾ.ಕೆ.ರಾಕೇಶ್‌ಕುಮಾರ್, ಪಾಲಿಕೆ ಆಯುಕ್ತ ಟಿ.ಭೂಬಾಲನ್, ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ಸಂಸ್ಥೆ ವ್ಯವಸ್ಥಾಪಕ ನಿರ್ದೇಶಕ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಟಿ.ರಂಗಸ್ವಾಮಿ, ಜಂಟಿ ವ್ಯವಸ್ಥಾಪಕ ನಿರ್ದೇಶಕ ಅಜೇಯ್ ವಿಠ್ಠಲ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಕೆ. ವಂಶಿಕೃಷ್ಣ ಇದ್ದರು.



ಸಭೆಯಲ್ಲಿ ಶಾಲಿನಿ ರಜನೀಶ್ ಮಾತನಾಡಿದರು. ಪಾಲಿಕೆ ಆಯುಕ್ತ ಟಿ.ಭೂಬಾಲನ್ ಇದ್ದರು

### ಲಾಲ್ ಬಾಗ್ ಮಾದರಿಯಲ್ಲಿ ವಿಶ್ವವನ

ಬೆಂಗಳೂರಿನ ಲಾಲ್ ಬಾಗ್ ಮಾದರಿಯಲ್ಲಿ ವಿಶ್ವವನ ಸ್ಮಾರ್ಟ್ ಸಿಟಿ ಸಂಸ್ಥೆ ನಿರ್ಮಿಸಲಿದೆ. ವಿವಿಧ ವರ್ಣಗಳ ಫಲಪುಷ್ಪ ಸಸಿಗಳನ್ನು ಒಳಗೊಂಡ ಪ್ರಸಿದ್ಧ ಸಸ್ಯೋದ್ಯಾನವನ್ನು ಈ ವನದಲ್ಲಿ ಕಾಣಬಹುದಾಗಿದೆ. ಶಿಲ್ಪಿಗಳ ವನ, ಥೀಮ್ ಪಾರ್ಕ್, ಜಿಮ್ ಪಾರ್ಕ್, ಗ್ರೀನ್ ಪಾರ್ಕ್, ಮಿನಿ ಸೋಲಾರ್ ಟ್ರೇನ್ ಪಾರ್ಕ್ ಸೇರಿದಂತೆ ವಿವಿಧ ಮಾದರಿಗಳನ್ನು ಇಲ್ಲಿ ನಿರ್ಮಿಸಲಾಗುವುದು ಎಂದು ಡಾ. ಶಾಲಿನಿ ರಜನೀಶ್ ಹೇಳಿದರು ಹೇಳಿದರು.

### ಸ್ಮಾರ್ಟ್ ಲಾಂಜ್‌ನಲ್ಲಿ ಏನೇನು?

ರಾಜ್ಯ ಸರ್ಕಾರದ ಮತ್ತು ಮಹಾನಗರ ಪಾಲಿಕೆ ವಿವಿಧ ಸೇವೆಗಳನ್ನು ಯಾರ ನೆರವೂ ಇಲ್ಲದೇ ಸ್ವತಃ ತಾವೇ ಪಡೆದುಕೊಳ್ಳಲು ಅನುಕೂಲವಾಗುವಂತೆ ಮಾಹಿತಿ ತಂತ್ರಜ್ಞಾನವುಳ್ಳ ಸ್ಮಾರ್ಟ್ ಲಾಂಜ್ ನಿರ್ಮಿಸಲಾಗುವುದು ಎಂದು ಶಾಲಿನಿ ರಜನೀಶ್ ವಿವರಿಸಿದರು.

'ಲಾಂಜ್‌ನಲ್ಲಿ ಕಿಯೋಸ್ಕ್, ಸಕಾಲ ಮೂಲಕ ಆಸ್ತಿ ತೆರಿಗೆ, ವಿದ್ಯುತ್, ನೀರಿನ ಶುಲ್ಕ, ಒಳಚರಂಡಿ ತೆರಿಗೆ, ಮೊಬೈಲ್ ಬಿಲ್‌ಗಳನ್ನು ಪಾವತಿಸಬಹುದು. ಜೊತೆಗೆ ಎಲ್‌ಐಸಿ ವಿಮೆ ಮೊತ್ತ ಪಾವತಿ, ಆಯ್ದ ಶಾಲಾ ಕಾಲೇಜುಗಳ ಶುಲ್ಕ ಪಾವತಿ, ಜನನ–ಮರಣ ಪ್ರಮಾಣ ಪತ್ರ, ಜಾತಿ ಪ್ರಮಾಣ ಪತ್ರ, ರೈಲ್ವೆ ಟಿಕೆಟ್ ಬುಕ್ಕಿಂಗ್, ವಿವಾಹ ನೋಂದಣಿ ಪ್ರಮಾಣ ಪತ್ರ ಮತ್ತಿತರ ಸೌಕರ್ಯಗಳನ್ನು ಪಡೆಯಲು ಅವಕಾಶ ಇರುತ್ತದೆ' ಎಂದರು.

## ಜಾಲತಾಣದಲ್ಲಿ ಸಿಗುತ್ತಿಲ್ಲ ಪರೀಕ್ಷಾ ಪ್ರವೇಶ ಪತ್ರ

**ಬೆಂಗಳೂರು:** ದ್ವಿತೀಯ ಪಿ.ಯು. ವಾರ್ಷಿಕ ಪರೀಕ್ಷೆ ಬರೆಯಲು ಹೆಸರು ನೋಂದಾಯಿಸಿಕೊಂಡಿರುವ ಲಕ್ಷಾಂತರ ವಿದ್ಯಾರ್ಥಿಗಳ ಪ್ರವೇಶ ಪತ್ರಗಳು ಪಿಯು ಶಿಕ್ಷಣ ಇಲಾಖೆಯ ಜಾಲ ತಾಣದಿಂದ ಡೌನ್‌ಲೋಡ್ ಆಗುತ್ತಿಲ್ಲ. ಇದರಿಂದ ಪ್ರಾಂಶುಪಾಲರು ಮತ್ತು ವಿದ್ಯಾರ್ಥಿ ಸಮೂಹ ಆತಂಕಕ್ಕೆ ಒಳಗಾಗಿದೆ.

'ಪ್ರವೇಶ ಪತ್ರಗಳನ್ನು ಜಾಲತಾಣದಲ್ಲಿ ಅಪ್‌ಲೋಡ್ ಮಾಡಲಾಗಿದೆ. ಅವುಗಳನ್ನು ಡೌನ್‌ಲೋಡ್ ಮಾಡಿಕೊಂಡು ವಿದ್ಯಾರ್ಥಿಗಳಿಗೆ ವಿತರಿಸಿ' ಎಂದು ಇಲಾಖೆ ಆಯುಕ್ತರು ಫೆ.14ರಂದು ತಿಳಿಸಿದ್ದರು. ಈ ಪ್ರಕ್ರಿಯೆ ಆರಂಭವಾಗಿ ಎರಡು ದಿನಗಳು ಕಳೆದರೂ ಪ್ರಾಂಶುಪಾಲರು ತಮ್ಮ ಐಡಿಯಿಂದ ಜಾಲತಾಣಕ್ಕೆ ಲಾಗಿನ್ ಆಗಿ ಪ್ರವೇಶ ಪತ್ರಗಳನ್ನು ಪಡೆಯಲಾಗುತ್ತಿಲ್ಲ. 'ಕನೆಕ್ಷನ್ ಟೈಮ್ ಔಟ್' ಎಂದು ಸೂಚನಾ ಸಂದೇಶ ಬಿತ್ತರಗೊಳ್ಳುತ್ತಿದೆ.

'ಈ ಕುರಿತು ಪರೀಕ್ಷಾ ವಿಭಾಗದ ಅಧಿಕಾರಿಗಳನ್ನು ಕೇಳಿದರೆ, ಪ್ರವೇಶ ಪತ್ರಗಳನ್ನು ಪಡೆಯಲು ಸಾವಿರಾರು ಪ್ರಾಂಶುಪಾಲರು ಏಕಕಾಲಕ್ಕೆ ಲಾಗಿನ್ ಆಗುವುದರಿಂದ ಹೀಗೆ ಆಗುತ್ತದೆ. ಒಂದೆರಡು ದಿನಗಳಲ್ಲಿ ತಾಂತ್ರಿಕ ದೋಷ ಸರಿಯಾಗುತ್ತದೆ.



ತುಮಕೂರು– ಮಧುಗಿರಿ ಚಿತ್ರಕಲಾ ಶಿಕ್ಷಕರ ಸಂಘದಿಂದ ನಿವೃತ್ತ ಶಿಕ್ಷಕರಿಗೆ ಸನ್ಮಾನಿಸಲಾಯಿತು

## ಪ್ರಗತಿ ಪರಿಶೀಲನಾ ಸಭೆಯಲ್ಲಿ ನಾಗಮಣಿ ಅಭಿಪ್ರಾಯ

# ಸೃಜನಾತ್ಮಕ ಕೌಶಲ ಅವಶ್ಯ

ಪ್ರಜಾವಾಣಿ ವಾರ್ತೆ

**ತುಮಕೂರು:** ಮಕ್ಕಳಲ್ಲಿ ಸೃಜನಾತ್ಮಕ ಕೌಶಲದಿಂದ ಶೈಕ್ಷಣಿಕ ಪ್ರಗತಿ ಹೊಂದಲು ಸಾಧ್ಯ ಎಂದು ಡಯಟ್ ಪ್ರಾಚಾರ್ಯರಾದ ನಾಗಮಣಿ ತಿಳಿಸಿದರು.

ನಗರದ ರವೀಂದ್ರ ಕಲಾನಿಕೇತನದಲ್ಲಿ ತುಮಕೂರು–ಮಧುಗಿರಿ ಚಿತ್ರಕಲಾ ಶಿಕ್ಷಕರ ಸಂಘದಿಂದ ಚಿತ್ರಕಲಾ ಶಿಕ್ಷಕರಿಗೆ ಆಯೋಜಿಸಿದ್ದ ಪ್ರಗತಿ ಪರಿಶೀಲನಾ ಸಭೆ ಮತ್ತು 10 ನೇ ವರ್ಷದ ರಾಜ್ಯ ಮಟ್ಟದ ಚಿತ್ರಕಲಾ ಸ್ಪರ್ಧೆಯನ್ನು ಉದ್ಘಾಟಿಸಿ ಮಾತನಾಡಿದರು.

ಶಿಕ್ಷಕರು ಎಸ್ಸೆಸ್ಸೆಲ್ಸಿ ಮಕ್ಕಳಿಗೆ ಹೆಚ್ಚು ಒತ್ತು ನೀಡಿ ಉತ್ತಮ ಫಲಿತಾಂಶ ನೀಡುವತ್ತಾ ಗಮನಹರಿಸಬೇಕಾಗಿದೆ. ಇದಕ್ಕೆ ಎಲ್ಲರ ಸಹಕಾರ, ಸಹಭಾಗಿತ್ವ ಅಗತ್ಯ ಎಂದು ಹೇಳಿದರು.

ನಿವೃತ್ತ ಶಿಕ್ಷಕರಾದ ವಿಶ್ವನಾಥ್ ಮತ್ತು ರಾಜ್ ಕುಮಾರ್ ಅವರನ್ನು ಗೌರವಿಸಲಾಯಿತು.

ಇಲಾಖೆಯಿಂದ ಆಗಮಿಸಿದ್ದ ಕಂಠಿ ಅವರು ಪ್ರಗತಿ ಪರಿಶೀಲಿಸಿ, ಚಿತ್ರಕಲಾ ಶಿಕ್ಷಕರಿಗೆ ಉತ್ತಮ ಮಾರ್ಗದರ್ಶನ ನೀಡಿದರು.

ಸಂಘದ ಅಧ್ಯಕ್ಷ ಭೂತಯ್ಯ, ಕಾರ್ಯದರ್ಶಿ ರಂಗಸ್ವಾಮಯ್ಯ, ಖಜಾಂಚಿ ಜಗದೀಶ್, ಹನುಮಾನ್ ಮೂರ್ತಿ, ಟಿ.ಎಚ್.ರವಿ, ರವೀಶ್, ಲಕ್ಷ್ಮೀಕಾಂತ್, ಇಂದ್ರಕುಮಾರ್, ಗೌರವಾಧ್ಯಕ್ಷ ಬಾಬೂರಾವ್ ಹಾಗೂ ಕಂದಗೂಳ್ ಇದ್ದಾರೆ.

## ನಾಳೆ ವಿವಿಧ ತಾಲ್ಲೂಕುಗಳಲ್ಲಿ ಎಸಿಬಿ ಸಭೆ

**ತುಮಕೂರು:** ಜಿಲ್ಲಾ ಭ್ರಷ್ಟಚಾರ ನಿಗ್ರಹ ದಳದಿಂದ ಡಿವೈಎಸ್‌ಪಿ ವಿ.ರಘುಕುಮಾರ್ ಅವರು ಫೆ.18 ರಿಂದ ಜಿಲ್ಲಾ ವಿವಿಧ ತಾಲ್ಲೂಕುಗಳಲ್ಲಿ ಸಭೆ ನಡೆಸಲಿದ್ದಾರೆ.

ಸಾವರ್ಜನಿಕರು ತಮ್ಮ ಸಮಸ್ಯೆಗಳ ಬಗ್ಗೆ ಆಯಾಯ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ನಿಗದಿತ ದಿನಾಂಕ ಮತ್ತು ಸಮಯದಲ್ಲಿ ದೂರು ನೀಡಬಹುದು.

ಫೆ.18ರಂದು ತಿಪಟೂರಿನಲ್ಲಿ ಬೆಳಿಗ್ಗೆ 11 ರಿಂದ ಮಧ್ಯಾಹ್ನ 1ರವರೆಗೆ. ಚಿಕ್ಕನಾಯಕನಹಳ್ಳಿಯಲ್ಲಿ ಮಧ್ಯಾಹ್ನ 3 ರಿಂದ ಸಂಜೆ 5ವರೆಗೆ. 19 ರಂದು ತುರುವೇಕೆರೆಯಲ್ಲಿ ಬೆಳಿಗ್ಗೆ 11 ರಿಂದ 1. ಕುಣಿಗಲ್‌ನಲ್ಲಿ ಮಧ್ಯಾಹ್ನ 3 ರಿಂದ 5 ರವರೆಗೆ. 20 ರಂದು ಗುಬ್ಬಿಯಲ್ಲಿ ಬೆಳಿಗ್ಗೆ 11 ರಿಂದ 1. ಶಿರಾದಲ್ಲಿ ಮಧ್ಯಾಹ್ನ 3 ರಿಂದ 5.

27 ರಂದು ಕೊರಟಗೆರೆಯಲ್ಲಿ ಬೆಳಿಗ್ಗೆ 11 ರಿಂದ 1. ತುಮಕೂರಿನಲ್ಲಿ ಮಧ್ಯಾಹ್ನ 3 ರಿಂದ 5 ರವರೆಗೆ. 28 ರಂದು ಪಾವಗಡದಲ್ಲಿ ಬೆಳಿಗ್ಗೆ 11 ರಿಂದ 1. ಮಧುಗಿರಿಯಲ್ಲಿ ಮಧ್ಯಾಹ್ನ 3 ರಿಂದ ಸಂಜೆ 5 ರವರೆಗೆ ದೂರು ನೀಡಬಹುದು.

# ವ್ಯಕ್ತಿತ್ವ ಬೆಳವಣಿಗೆಗೆ ಶಿಕ್ಷಣ ಅವಶ್ಯಕ

ಪ್ರಜಾವಾಣಿ ವಾರ್ತೆ

**ತುಮಕೂರು:** ಮನುಷ್ಯನ ಪೂರ್ಣ ಪ್ರಮಾಣದ ವ್ಯಕ್ತಿತ್ವ ಬೆಳೆಯುವುದು ಶಿಕ್ಷಣದಿಂದಲೇ. ವಿದ್ಯಾವಂತ, ಬುದ್ಧಿವಂತ ಹಾಗೂ ಗುಣವಂತನಾದಾಗ ಮಾತ್ರ ಶಿಕ್ಷಣದ ಉದ್ದೇಶ ಪೂರ್ಣಗೊಳ್ಳುತ್ತದೆ ಎಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಚಾರ್ಯ ಪ್ರೊ.ಜಗದೀಶ್ ಹೇಳಿದರು.

ಗುಬ್ಬಿ ಪಟ್ಟಣದ ಸ್ಟೆಲ್ಲಾ ಮೆರಿಸ್ ಇಂಗ್ಲಿಷ್ ಮಾಧ್ಯಮ ಶಾಲೆದಲ್ಲಿ ನಡೆದ ವಾರ್ಷಿಕೋತ್ಸವ ಸಮಾರಂಭದಲ್ಲಿ ಮಾತನಾಡಿದ ಅವರು, ಶಿಕ್ಷಣದಿಂದ ಸಂಸ್ಕೃತಿ, ಕೌಶಲತೆ, ಪರಿವರ್ತನೆ, ತೇಜಸ್ಸು, ಉತ್ತಮ ವ್ಯಕ್ತಿತ್ವ ಬೆಳೆಯುತ್ತದೆ ಎಂದರು.

ಮನುಷ್ಯ ಪರಿಸರದ ಕೂಸು. ಹಾಗಾಗಿ ಅಂತಹ ಪರಿಸರದಲ್ಲಿ ಸ್ವತ್ವ ಮತ್ತು ತತ್ವ ಇರಬೇಕು. ಆಗಲೇ ವ್ಯಕ್ತಿತ್ವದ ಜತೆಗೆ ಉತ್ತಮ ಸಮಾಜ ನಿರ್ಮಾಣ ಆಗಲು ಸಾಧ್ಯ ಎಂದು ಹೇಳಿದರು.

ಗುಬ್ಬಿ ತಾಲ್ಲೂಕಿನ ಶಿಕ್ಷಣಾಧಿಕಾರಿ ವೆಂಕಟೇಶಪ್ಪ ಮಾತನಾಡಿ, ಮಕ್ಕಳ ಶೈಕ್ಷಣಿಕ ಅಭಿವೃದ್ಧಿಯಲ್ಲಿ ಶಿಕ್ಷಕರ ಪಾತ್ರ ಎಷ್ಟು ಮುಖ್ಯವೊ ಅಷ್ಟೇ ಮುಖ್ಯ ಪೋಷಕರದ್ದು, ಹಾಗಾಗಿ ಅವರ ಸರ್ವಾಂಗೀಣ ಅಭಿವೃದ್ಧಿಗೆ ಪೋಷಕರು ಶ್ರಮಿಸಬೇಕು ಎಂದು ಹೇಳಿದರು.

ಗುಬ್ಬಿ ಪಟ್ಟಣ ಪಂಚಾಯಿತಿ ಸದಸ್ಯ ಸಿ.ಮೋಹನ್, ಕೃಷ್ಣಮೂರ್ತಿ, ಶಿವಕುಮಾರ್ ಶೌಕತ್ ಇದ್ದರು. ಶಿಕ್ಷಕಿ ಶ್ವೇತಾ ಸ್ವಾಗತಿಸಿದರು. ಅಮರ್ ಸಿಂಧೆ ಶಾಲಾ ವರದಿ ವಾಚಿಸಿದರು. ಆನಂದ್ ವಂದಿಸಿದರು. ಜಿ.ಟಿ.ಪವಿತ್ರಾ ಮತ್ತು ಪ್ರಿಯಾಂಕಾ ನಿರೂಪಿಸಿದರು.



ಗುಬ್ಬಿ ಪಟ್ಟಣದ ಸ್ಟೆಲ್ಲಾ ಮೆರಿಸ್ ಆಂಗ್ಲಶಾಲೆದಲ್ಲಿ ನಡೆದ ವಾರ್ಷಿಕೋತ್ಸವ ಸಮಾರಂಭವನ್ನು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಚಾರ್ಯ ಪ್ರೊ.ಜಗದೀಶ್ ಉದ್ಘಾಟಿಸಿದರು

# ಇಂದಿನಿಂದ ಜಾನಪದ ಮಾಗಿ ಉತ್ಸವ

**ಹುಳಿಯಾರು:** ಸಮೀಪದ ಕೋಡಿ ಪಾಳ್ಯದ ಮಾತಾ ಚಾರಿಟಬಲ್ ಟ್ರಸ್ಟ್ ಹಾಗೂ ತಂಜಾವೂರು ದಕ್ಷಿಣ ವಲಯ ಸಾಂಸ್ಕೃತಿಕ ಕೇಂದ್ರದ ವತಿಯಿಂದ ಇದೇ 17ರಿಂದ 19ರ ವರೆಗೆ ಈಶಾನ್ಯ ರಾಜ್ಯಗಳ ಜಾನಪದ ಮಾಗಿ ಉತ್ಸವ ನಡೆಯಲಿದೆ.

ಮೂರು ದಿನಗಳ ಜಾನಪದ ಉತ್ಸವದಲ್ಲಿ ಈಶಾನ್ಯ ರಾಜ್ಯಗಳಾದ ಮಿಜೋರಾಂ, ಮಣಿಪುರ, ನಾಗಾಲ್ಯಾಂಡ್, ಅರುಣಾಚಲ ಪ್ರದೇಶ, ತ್ರಿಪುರ, ಸಿಕ್ಕಿಂ, ಮೇಘಾಲಯ ರಾಜ್ಯಗಳ ಜಾನಪದ ಕಲಾವಿದರು ಭಾಗವಹಿಸಿ, ಅಲ್ಲಿಯ ದೇಶಿ ಸಂಸ್ಕೃತಿ ಪ್ರಸ್ತುತ ಪಡಿಸಲಿದ್ದಾರೆ ಎಂದು ದಕ್ಷಿಣ ವಲಯ ಸಾಂಸ್ಕೃತಿಕ ಕೇಂದ್ರದ ಸದಸ್ಯ ತೊಟ್ಟವಾಡಿ ನಂಜುಂಡಸ್ವಾಮಿ ತಿಳಿಸಿದ್ದಾರೆ.

17ರಂದು ಸಂಜೆ ಉದ್ಘಾಟನಾ ಸಮಾರಂಭದಲ್ಲಿ ಅರಸೀಕೆರೆ- ಮಾಡಾಳು ನಿರಂಜನ ಪೀಠದ ರುದ್ರಮುನಿ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಪತ್ರಿಕರ್ತರಾದ ಮಂಜುನಾಥ ಅದ್ದೆ, ಬಿ.ಎನ್.ರಮೇಶ್ ಭಾಗವಹಿಸಲಿದ್ದಾರೆ. 19ರಂದು ಸಮಾರೋಪ ಸಮಾರಂಭದಲ್ಲಿ ಕುಪ್ಪೂರು ಗದ್ದಿಗೆ ಮಠದ ಯತೀಶ್ವರ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಮಾಜಿ ಶಾಸಕ ಕೆ.ಎಸ್. ಕಿರಣ್ ಕುಮಾರ್, ಪತ್ರಕರ್ತ ಶಿವಾಜಿ ಗಣೇಶನ್ ಭಾಗವಹಿಸಲಿದ್ದಾರೆ ಎಂದು ಟ್ರಸ್ಟ್ ಸಂಸ್ಥಾಪಕ ಗಂಗಾಧರ್ ತಿಳಿಸಿದ್ದಾರೆ.

# ಉದ್ಯಮಶೀಲತಾ ತರಬೇತಿ

**ತುಮಕೂರು:** ಕೈಮಗ್ಗ ಮತ್ತು ಜವಳಿ ಇಲಾಖೆಯು ಜವಳಿ ಉದ್ಯಮದಲ್ಲಿ ಘಟಕಗಳನ್ನು ಆರಂಭಿಸಲಿಚ್ಛಿಸುವ ತುಮಕೂರು, ಚಿತ್ರದುರ್ಗ, ದಾವಣಗೆರೆ, ಹಾಸನ, ಶಿವಮೊಗ್ಗ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳ ನಿರುದ್ಯೋಗಿ ಯುವಕ, ಯುವತಿಯರಿಗೆ ಫೆಬ್ರುವರಿ ತಿಂಗಳಾಂತ್ಯದಲ್ಲಿ 2 ದಿನಗಳ ಉದ್ಯಮಶೀಲತಾ ತರಬೇತಿ ನೀಡಲು ಅರ್ಹರಿಂದ ಅರ್ಜಿ ಆಹ್ವಾನಿಸಿದೆ.

ಜವಳಿ ಆಧಾರಿತ ಕೈಗಾರಿಕಾ ಘಟಕಗಳಲ್ಲಿ ಕಾಟನ್, ಜಿನ್ನಿಂಗ್, ಪ್ರೆಸ್ಸಿಂಗ್, ಗಾರ್ಮೆಂಟ್ಸ್, ಟೆಕ್ನಿಕಲ್, ಟೆಕ್ಸ್‌ಟೈಲ್ಸ್ ಹಾಗೂ ಜವಳಿ ಸಂಸ್ಕರಣಾ ಘಟಕ ಪ್ರಾರಂಭಿಸಲಿಚ್ಛಿಸುವ ಸದುಪಯೋ ಪಡಿಸಿಕೊಳ್ಳಬಹುದು.

ಆಸಕ್ತರು ಮಾಹಿತಿಗೆ ಜಂಟಿ ನಿರ್ದೇಶಕ ಕಚೇರಿ, ಕೈಮಗ್ಗ ಮತ್ತು ಜವಳಿ ಇಲಾಖೆ, ಪೂರ್ವ ವಲಯ, ಅಶೋಕ ನಗರ, 9ನೇ ಮುಖ್ಯರಸ್ತೆ, ತುಮಕೂರು ಇವರಿಗೆ ಫೆ. 25 ರೊಳಗಾಗಿ ಸಂಪರ್ಕಿಸಬಹುದು.

### ಕಾಣೆಯಾಗಿದ್ದಾರೆ



**ಎ.ಎಲ್. ಪ್ರಸನ್ನಕುಮಾರ್**

ವಯಸ್ಸು 79, ಎತ್ತರ 5.6 ಅಡಿ ಮತ್ತು ಧೃಡವಾದ ಮೈಕಟ್ಟು, ಗೋಧಿ ಮೈ ಬಣ್ಣ, ದುಂಡು ಮುಖ, ಕಪ್ಪು ಮತ್ತು ಬಿಳಿ ಮಿಶ್ರಿತ ತಲೆ ಕೂದಲು, ಕನ್ನಡ, ತೆಲುಗು, ತಮಿಳು, ಹಿಂದಿ ಮಾತನಾಡುತ್ತಾರೆ. ತಲೆಯ ಎಡಭಾಗದಲ್ಲಿ ಕಪ್ಪು ಬಣ್ಣದ ಗಂಟು ಇದೆ, ನಡೆಯಲು ಸ್ಟಿಕ್ ಅನ್ನು ಉಪಯೋಗಿಸುತ್ತಾರೆ.

ಸಂಪರ್ಕಿಸಿ: 9731236417, 9916293105




Cheil-223/19